# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | | 285 |
| **ಸದಸ್ಯರ ಹೆಸರು** | | ಶ್ರೀ ಎಸ್. ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| **ಉತ್ತರಿಸಬೇಕಾದ ದಿನಾಂಕ** | | 11.12.2024 |
| **ಉತ್ತರಿಸಬೇಕಾದ ಸಚಿವರು** | | ಮಾನ್ಯ ಕಂದಾಯ ಸಚಿವರು |
| **ಕ್ರ.** | **ಪ್ರಶ್ನೆ ವಿವರ** | **ಕರಡು ಉತ್ತರ** |
| ಅ) | ಗ್ರಾಮ ನಕ್ಷೆಗಳ ಪ್ರಕಾರ ಯಾವುದೇ ಜಮೀನು / ಸರ್ವೇ ನಂಬರ್ ಗಳಲ್ಲಿರುವ ವಿವಿಧ ಬಗೆಯ ನೈಸರ್ಗಿಕ ನೀರಿನ ಮೂಲ ಗಳನ್ನು (ನದಿ, ತೊರೆ, ರಾಜ ಕಾಲುವೆ, ನಾಲೆ, ಹಳ್ಳ, ಕೊರಕಲು ಇತ್ಯಾದಿಗಳನ್ನು) ಎಷ್ಟು ರೀತಿಯಲ್ಲಿ ವರ್ಗೀಕರಿಸಲಾಗಿದೆ; ಈ ರೀತಿ ವರ್ಗೀಕರಿಸಲಾದ ನೀರಿನ ಮೂಲಗಳ ಅಗಲ ಮತ್ತು ಆಳಗಳನ್ನು ಎಷ್ಟು ಅಡಿ / ಮೀಟರ್ ಗಳಿಗೆ ನಿಗಧಿಪಡಿಸಲಾಗಿದೆ; ಈ ನೀರಿನ ಮೂಲಗಳ ಅಕ್ಕಪಕ್ಕದ (ಬಫರ್ ವಲಯ) ಎಷ್ಟು ವಿಸ್ತೀರ್ಣದಲ್ಲಿ ಯಾವ ಯಾವ ಚಟುವಟಿಕೆಗಳನ್ನು (ನಿವೇಶನ ನಿರ್ಮಾಣ, ಕಟ್ಟಡ ನಿರ್ಮಾಣ, ಕೈಗಾರಿಕೆ, ವಾಣಿಜ್ಯ, ಕೃಷಿ ಇತ್ಯಾದಿ) ನಿರ್ಬಂಧಿಸಲಾಗಿದೆ; (ಆದೇಶಗಳ ಸಹಿತ ಮಾಹಿತಿ ನೀಡುವುದು) | **ಭೂ ಮಾಪನ, ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆ:** ಗ್ರಾಮ ನಕಾಶೆಯಲ್ಲಿ ದಾಖಲಿಸಿರುವ ನೀರಿನ ಮೂಲಗಳನ್ನು ಮೂಲ ಸರ್ವೆ, ರೀಸರ್ವೆ ಮತ್ತು ರೀ-ಕ್ಲಾಸಿಫಿಕೇಷನ್ ಕಾಲದಲ್ಲಿ ಅಳತೆ ಮಾಡಿ ಪ್ರತಿ ಪುಸ್ತಕದಲ್ಲಿ ಸ್ಪಷ್ಟವಾಗಿ ದಾಖಲಿಸಲಾಗಿರುತ್ತದೆ. ನೀರಿನ ಮೂಲಗಳನ್ನು, ಕಾಲವೆ, ಹಳ್ಳ, ಪಿಳ್ಳಗಾಲುವೆ, ಹದ್ದಿಗಿಡಿದ ಹಳ್ಳ, ಕೆರೆ, ಕುಂಟೆ ಇತ್ಯಾದಿ ಎಂಬುದಾಗಿ ವರ್ಗಿಕರಿಸಲಾಗಿದೆ. ಅಂತೆಯೇ ಸದರಿ ನೀರಿನ ಮೂಲಗಳ ಬಗ್ಗೆ ವಿವರವಾಗಿ ಪ್ರತಿ ಪುಸ್ತಕದಲ್ಲಿ ಮಜಕೂರ ಅನ್ನು ದಾಖಲಿಸಲಾಗಿರುತ್ತದೆ.<br>ತರಿ ಮತ್ತು ಭಾಗಾಯ್ತು ಜಮೀನುಗಳ ನೀರಿನ ಆಶ್ರಯದ ಬಗ್ಗೆ (ಸರ್ಕಾರಿ / ಇತರೆ) ಆಕಾರಬಂದಿನಲ್ಲಿ ಸ್ಪಷ್ಟವಾಗಿ ದಾಖಲಿಸಲಾ ಗಿರುತ್ತದೆ. ಸರ್ವೆ ನಂಬರಿನ ಒಳಗಡೆ ಬರುವ ಹಳ್ಳ, ಕಾಲುವೆ ಇತ್ಯಾದಿಗಳ ಉದ್ದ ಮತ್ತು ಅಗಲಗಳನ್ನು ಸಹ ಪ್ರತಿ ಪುಸ್ತಕದಲ್ಲಿ ನಮೂದಿಸಲಾಗಿರುತ್ತದೆ. ಆದರೆ ನೀರಿನ ಮೂಲದ ಆಳದ ಕುರಿತು ಯಾವುದೇ ಉಲ್ಲೇಖವಿರುವುದಿಲ್ಲ. ಎರಡು ಸರ್ವೆ ನಂಬರಿನ ಮದ್ಯ ಹರಿಯುವ ಹಳ್ಳದ ಅಳತೆಯನ್ನು(ಹದ್ದಿಗೆ ಹಿಡಿದ ಹಳ್ಳ) ಆ ನಂಬರುಗಳನ್ನು ಅಳತೆ ಮಾಡಿ ಗಡಿ ನಿಗಧಿಪಡಿಸಿದ ನಂತರವೇ, ಸ್ಥಳದಲ್ಲಿ ಪಡೆಯಬಹುದಾಗಿದೆ. ಆದರೆ ಇದರ ಒಟ್ಟು ವಿಸ್ತೀರ್ಣವನ್ನು ಆಕಾರಬಂದಿನ ಕೊನೆಯಲ್ಲಿ ದಾಖಲಿಸಲಾಗಿರುತ್ತದೆ.<br>**ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ:** ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ನೈಸರ್ಗಿಕ ನೀರಿನ ಮೂಲಗಳನ್ನು ವರ್ಗೀಕರಿಸುವ ಕುರಿತು ಯಾವುದೇ ಆದೇಶ ಹೊರಡಿಸಿರುವುದಿಲ್ಲ.<br>ನಗರಾಭಿವೃದ್ಧಿ ಇಲಾಖೆಯ ವತಿಯಿಂದ ಹೊರಡಿಸಿರುವ ಸರ್ಕಾರದ ಆದೇಶ ಸಂಖ್ಯೆ : ನಅಇ 11 ಬಿಎಂಆರ್ 2017 ದಿನಾಂಕ : 20.07.2019 ರಲ್ಲಿ ತಿಪ್ಪಗೊಂಡನಹಳ್ಳಿ ಜಲಾಶಯ ಮತ್ತು ಜಲಾನಯನ ಪ್ರದೇಶ ಅರ್ಕಾವತಿ ಮತ್ತು ಕುಮುದ್ವತಿ ನದಿಗಳ ಜಲಾನಯನ ಪ್ರದೇಶದ |

| | | |
|---|---|---|
| | | ವ್ಯಾಪ್ತಿಯಲ್ಲಿ ಬಫರ್ ಜೋನ್ ಅನ್ನು ಈ ಕೆಳಕಂಡಂತೆ ನಿಗದಿಪಡಿಸಿ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಹಾಗೂ ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ ವ್ಯಾಪ್ತಿಯಲ್ಲಿನ ಎಲ್ಲಾ ನಗರ ಯೋಜನಾ ಪ್ರಾಧಿಕಾರಗಳಿಗೆ ಅವರವರ ವಲಯ ನಿಮಯಾವಳಿಗಳಲ್ಲಿ ಕಡ್ಡಾಯವಾಗಿ ಅಳವಡಿಸಿಕೊಳ್ಳಲು ಆದೇಶಿಸಿದೆ.<br><br>• ಕೆರೆಗಳಿಗೆ 30 ಮೀ .<br>• ಪ್ರಾಥಮಿಕ ರಾಜ ಕಾಲುವೆಗೆ 30 ಮೀ.<br>• ಎರಡನೇ ಹಂತದ ರಾಜ ಕಾಲುವೆಗೆ 15 ಮೀ.<br>• ಮೂರನೇ ಹಂತದ ರಾಜ ಕಾಲುವೆಗೆ 10 ಮೀ.<br><br>ಈ ಬಫರ್ ಜೋನ್‌ಗಳನ್ನು non-urbanisable Zone ಗಳಾಗಿ ನಿರ್ವಹಿಸುವುದು. ಆದೇಶದ ಪ್ರತಿಯನ್ನು **ಅನುಬಂಧ-1** ರಲ್ಲಿ ಒದಗಿಸಲಾಗಿದೆ.<br><br>ಮುಂದುವರೆದು, ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರದ ಅಧಿನಿಯಮ 2014 ಮತ್ತು ತದನಂತರ ತಿದ್ದುಪಡಿಗಳನ್ವಯ ಪ್ರಕರಣ 12(3) ರಲ್ಲಿ ಕೆರೆಗಳಿಗೆ ಸಂಬಂಧಿಸಿದಂತೆ ಈ ರೀತಿ ನಿರ್ಬಂಧ ವಿಧಿಸಿಲಾಗಿರುತ್ತದೆ.<br>"Make any construction or carry on any commercial or recreational or industrial activity within thirty meters (30 m.) from the outer boundary of the tank".<br><br>**ನಗರಾಭಿವೃದ್ಧಿ ಇಲಾಖೆ: (ಎ)** ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಗ್ರಾಮ ನಕ್ಷೆಯಲ್ಲಿರುವ ನೈಸರ್ಗಿಕ ನೀರಿನ ಮೂಲಗಳ ವರ್ಗೀಕರಣಕ್ಕೆ ನಿರ್ದಿಷ್ಟವಾದ ಯಾವುದೇ ವ್ಯಾಖ್ಯಾನ ಇರುವುದಿಲ್ಲ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಪರಿಷ್ಕೃತ ಮಹಾಯೋಜನೆ-2015ರಂತೆ ಮಳೆ ನೀರುಗಾಲುವೆ ಗಳನ್ನು ಪ್ರೈಮರಿ, ಸೆಕೆಂಡರಿ ಹಾಗೂ ಟೆರಿಷರಿ ನಾಲಾಗಳೆಂದು ವರ್ಗೀಕರಣಗೊಳಿಸಲಾಗಿರುತ್ತದೆ.<br>**(ಬಿ)** ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಪರಿಷ್ಕೃತ ಮಹಾಯೋಜನೆ -2015ರಲ್ಲಿ ನಾಲಾ ಮಧ್ಯ ರೇಖೆಯಿಂದ ಎರಡೂ ಬದಿಗಳಲ್ಲಿ ಪ್ರೈಮರಿ ನಾಲಾಗೆ 50.00 ಮೀ ಬಫರ್, ಸೆಕೆಂಡರಿ ನಾಲಾಗೆ 25.00 ಮೀ ಬಫರ್ ಹಾಗೂ ಟೆರಿಷರಿ ನಾಲಾಗೆ 15.00 ಮೀ ಬಫರ್ ಎಂದು ನಿಗಧಿಪಡಿಸಲಾಗಿರುತ್ತದೆ. |

| | | |
|---|---|---|
| ಆ) | ಜಮೀನು / ಸರ್ವೆ ನಂಬರ್ ನಲ್ಲಿರುವ ವಿವಿಧ ಬಗೆಯ ನೈಸರ್ಗಿಕ ನೀರಿನ ಮೂಲ ಗಳನ್ನು ಜಮೀನಿನ ಮಾಲೀಕರು ಮತ್ತು ಅನುಭವದಾರರು ಯಾವ ಯಾವ ಉದ್ದೇಶ ಗಳಿಗೆ ಬಳಸಿಕೊಳ್ಳಬಹುದು; ಯಾವ ಯಾವ ಉದ್ದೇಶಗಳಿಗೆ ಬಳಸಿಕೊಳ್ಳ ಬಾರದು? ( ಈ ಬಗ್ಗೆ ವಿವರ ನೀಡುವುದು) | **ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ:** ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರದ ಅಧಿನಿಯಮ 2014 ಹಾಗೂ ತದನಂತರದ ತಿದ್ದುಪಡಿಗಳ ಪ್ರಕರಣ (12) ರನ್ವಯ ಸರ್ಕಾರಿ ಕೆರೆಗಳಿಗೆ ಸಂಬಂಧಿಸಿದಂತೆ ನಿಷೇಧಿಸಲಾದ ಚಟುವಟಿಕೆಗಳ ವಿವರಗಳನ್ನು **ಅನುಬಂಧ – 2** ರಲ್ಲಿ ಒದಗಿಸಲಾಗಿದೆ.<br>**ನಗರಾಭಿವೃದ್ಧಿ ಇಲಾಖೆ:** ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಜಮೀನು / ಸರ್ವೆ ನಂಬರ್ ನಲ್ಲಿರುವ ವಿವಿಧ ಬಗೆಯ ನೈಸರ್ಗಿಕ ನೀರಿನ ಮೂಲಗಳನ್ನು ಜಮೀನಿನ ಮಾಲೀಕರು ಅಧಿಸೂಚನೆ ಸಂಖ್ಯೆ: ಯುಡಿಡಿ 15 ಟಿಟಿಪಿ 2015, ದಿನಾಂಕ: 21.04.2020ರಂತೆ ಕೆಳಗಿನಂತೆ ನಮೂದಿಸಿರುವ ಚಟುವಟಿಕೆಗಳನ್ನು ಮಾತ್ರ ಬಫರ್ ಪ್ರದೇಶದಲ್ಲಿ ಕೈಗೊಳ್ಳಬಹುದಾಗಿರುತ್ತದೆ. ಆದೇಶದ ಪ್ರತಿಯನ್ನು **ಅನುಬಂಧ-3ರಲ್ಲಿ** ಒದಗಿಸಲಾಗಿದೆ.<br>"Amendment of the Master Plans or Zonal Regulations approved by the State Government of any Local Planning Area,-Notwithstanding anything contained in the approved Master Plans or Zoning Regulations of any Local Planning Area, in force, in the State, the following Infrastructure shall be permitted within the buffer area along the rivers and other Water bodies, namely:-<br>1. Water Pumping Stations;<br>2. Walking tracks;<br>3. Play fields without any Building Construction;<br>4. Cycling tracks, and<br>5. Parks " |

**ಸಂಖ್ಯೆ: ಕಂಇ 375 ಎಂಆರ್ ಆರ್ 2024**

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು

ಪ್ರಶ್ನೆ ಸಂಖ್ಯೆ : 985

ಅನುಬಂಧ - 1

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ತಿಪ್ಪಗೊಂಡನಹಳ್ಳಿ ಜಲಾಶಯ ಮತ್ತು ಜಲಾನಯನ ಪ್ರದೇಶದ ಅರ್ಕಾವತಿ ಮತ್ತು ಕುಮುದ್ವತಿ ನದಿಗಳ ಜಲಾನಯನ ಪ್ರದೇಶದ ವ್ಯಾಪ್ತಿಯಲ್ಲಿ ಬಫರ್ ಜೋನ್ ನಿಗದಿಪಡಿಸುವ ಬಗ್ಗೆ.

ಓದಲಾಗಿದೆ:
1. ಸರ್ಕಾರದ ಅಧಿಸೂಚನೆ ಸಂಖ್ಯೆ: ಎಫ್‌ಇಇ 215 ಇಎನ್‌ವಿ 2000, ದಿನಾಂಕ: 18.11.2003.
2. ಸರ್ಕಾರದ ಆದೇಶ ಸಂಖ್ಯೆ: ಅಪಜೀ 01 ಇಎನ್‌ಜಿ 2011, ದಿನಾಂಕ: 24.07.2014.

** ** **

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮ ಸಂಖ್ಯೆ(1)ರಲ್ಲಿನ ಸರ್ಕಾರದ ಅಧಿಸೂಚನೆ ದಿನಾಂಕ: 18.11.2003ರಲ್ಲಿ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆಯು ಪರಿಸರ (ನಿಯಂತ್ರಣ) ಕಾಯ್ದೆ 1986ರ ಕಲಂ 5 ರಡಿಯಲ್ಲಿ ಅರ್ಕಾವತಿ ಮತ್ತು ಕುಮುದ್ವತಿ ನದಿಗಳನ್ನು ರಕ್ಷಿಸಿ, ತಿಪ್ಪಗೊಂಡನಹಳ್ಳಿ ಜಲಾಶಯದ ಒಳಹರಿವು ಹೆಚ್ಚಿಸುವ ದೃಷ್ಟಿಯಿಂದ ತಿಪ್ಪಗೊಂಡನಹಳ್ಳಿ ಜಲಾನಯನ ಪ್ರದೇಶವನ್ನು ಈ ಕೆಳಕಂಡಂತೆ ನಾಲ್ಕು ವಲಯಗಳನ್ನಾಗಿ ವಿಂಗಡಿಸಿ, ಪ್ರತಿ ವಲಯದಲ್ಲಿ ಯಾವ ಯಾವ ಚಟುವಟಿಕೆಗಳನ್ನು ಅನುಮತಿಸಬಹುದು ಮತ್ತು ಯಾವ ಚಟುವಟಿಕೆಗಳನ್ನು ನಿಷೇಧಿಸಲಾಗಿದೆ ಎಂಬ ಷರತ್ತುಗಳನ್ನು ವಿಧಿಸಲಾಗಿರುತ್ತದೆ.

| Zone | Area Covered. | Nature of restricted/regulated activities |
|---|---|---|
| (1) | (2) | (3) |
| Zone-1 | Entire Tippagondanahalli Reservoir (TGR) catchment area specified in Annexure to this Notification. | a) Regulation and checking over exploitation of ground water.<br>b) No fresh leases or licence for mining, quarrying and stone crushers shall be granted.<br>c) No person shall dispose solid as well as liquid waste in this area without scientific Processing.<br>d) To ensure adoption of rain water harvesting systems in all the new and existing buildings, within six months from the date of issue of this order.<br>e) To promote organic farming including bio-fertilizers and bio-pesticide. |
| Zone-2 | Area covered within 2 kms from the Tippagondana halli Reservoir (TGR) boundary | No person shall carry on activities other than Agricultural or Agriculture related activities without prior permission |

| | | |
|---|---|---|
| Zone-3 | Area covered within 1 km distance from the river banks of Arkavathy (only upto Hesarghatta tank from TGR) and Kumudvathi | No person shall carry on activities other than Agriculture or Agriculture related activities without prior permission |
| Zone-4 | Area covered within 1 km to 2 Km distance from the river banks of Arkavathy (only upto Hesaraghatta Tank from TGR) and Kumudvathi (Excluding the areas falling within zone 2) | a) Permit only those industrial activities which are listed as Green category, by the Karnataka State Pollution Control Board with mandatory adoption of rainwater harvesting systems and waste water treatment facilities. The other regulatory/civic agencies to issue permit only after Consent form Establishment (CFE) is obtained from the KSPCB.<br>b) Permit new buildings with only ground and first floor with mandatory adoption of rainwater harvesting systems. |

ಮೇಲೆ ಓದಲಾದ ಕ್ರಮ ಸಂಖ್ಯೆ: (2)ರ ಆದೇಶದಲ್ಲಿ ದಿನಾಂಕ: 18-11-2003ರ ಅಧಿಸೂಚನೆಯನ್ನು ಹಿಂಪಡೆದು, ಈ ವಿಷಯದ ಕುರಿತು ಹೊಸದಾಗಿ ಅಧಿಸೂಚನೆ ಹೊರಡಿಸುವವರೆಗೂ ತಿಪ್ಪಗೊಂಡನಹಳ್ಳಿ ಜಲಾನಯನ ಪ್ರದೇಶದಲ್ಲಿ ಯಾವುದೇ ಹೊಸ ಅನಧಿಕೃತ ಕಟ್ಟಡಗಳು ಹಾಗೂ ಕೃಷಿಯೇತರ ಚಟುವಟಿಕೆಗಳಿಗೆ ಮಂಜೂರಾತಿ ನೀಡಬಾರದೆಂದು ಆದೇಶಿಸಲಾಗಿರುತ್ತದೆ.

ಸದರಿ ಆದೇಶಕ್ಕೆ ಮಾನ್ಯ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ:38218/2013ರಲ್ಲಿ ದಿನಾಂಕ: 23-07-2014ರಂದು ತಡೆಯಾಜ್ಞೆ ನೀಡಿರುತ್ತದೆ. ದಿನಾಂಕ: 12-08-2014ರಂದು ಮಾನ್ಯ ಕಾನೂನು ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಈ ಬಗ್ಗೆ ಮುನರ್ ಪರಿಶೀಲಿಸಲು ಹಾಗೂ ಪ್ರಸ್ತುತ ಪರಿಸ್ಥಿತಿಯ ಬಗ್ಗೆ ಸಮಗ್ರ ಅಧ್ಯಯನ ಕೈಗೊಳ್ಳಲು ಎಂಪ್ರಿ (EMPRI)ಸಂಸ್ಥೆಗೆ ವಹಿಸಲು ತೀರ್ಮಾನಿಸಲಾಗಿರುತ್ತದೆ. ಅದರಂತೆ ಎಂಪ್ರಿ ಸಂಸ್ಥೆಯು ತಿಪ್ಪಗೊಂಡನಹಳ್ಳಿ ಜಲಾನಯನ ಪ್ರದೇಶದ ಅಧ್ಯಯನ ಕೈಗೊಂಡು ದಿನಾಂಕ: 05-09-2015ರಂದು ಅಂತಿಮ ವರದಿಯನ್ನು ಸಲ್ಲಿಸಿರುತ್ತದೆ.

ಸದರಿ ವಿಷಯದ ಕುರಿತು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಹಲವಾರು ರಿಟ್ ಅರ್ಜಿಗಳು ಸಲ್ಲಿಕೆಯಾಗಿದ್ದು, ಮಾನ್ಯ ಉಚ್ಚ ನ್ಯಾಯಾಲಯವು ಪ್ರಶ್ನಿತ ಅಧಿಸೂಚನೆಯನ್ನು ಮುಂದುವರೆಸುವ ಬಗ್ಗೆ ಅಥವಾ ತಿಪ್ಪಗೊಂಡನಹಳ್ಳಿ ಜಲಾಶಯ ಜಲಾನಯನ ಪ್ರದೇಶದ ಸಂರಕ್ಷಣೆಗಾಗಿ ಇನ್ನಿತರ ಯಾವುದೇ ಅಧಿಸೂಚನೆಯನ್ನು ಹೊರಡಿಸುವ ಬಗ್ಗೆ ಸರ್ಕಾರದ ನಿಲುವನ್ನು ತಿಳಿಸುವಂತೆ ಕೋರಿರುತ್ತದೆ.

ಕುಡಿಯುವ ನೀರಿನ ಜಲಾಶಯ ಮತ್ತು ಅದಕ್ಕೆ ನೀರೊದಗಿಸುವ ನದಿ ಮೂಲಗಳ ಸಂರಕ್ಷಣೆಗೆ ಸಂಬಂಧಿಸಿದಂತೆ ನಿರ್ದಿಷ್ಟವಾಗಿ ಒದಗಿಸಬೇಕಾದ ಬಫರ್ ಜೋನ್ ಬಗ್ಗೆ ಯಾವುದೇ ನಿಖರ ವೈಜ್ಞಾನಿಕ ಮಾರ್ಗಸೂಚಿಗಳು ಕಂಡುಬಂದಿರುವುದಿಲ್ಲ. ಅಲ್ಲದೇ ದೇಶದ ಪ್ರಮುಖ ನದಿಯಾದ ಗಂಗಾ ನದಿಗೆ ಸಂಬಂಧಿಸಿದಂತೆ 100ಮೀ ಬಫರ್ ಅನ್ನು ನಿಗದಿಪಡಿಸಲಾಗಿದ್ದು, ಇತರ ಯಾವುದೇ ರಾಜ್ಯಗಳ ನದಿ ಪಾತ್ರಗಳಲ್ಲಿಯೂ ಸಹ ಈ ರೀತಿ ನಿರ್ಬಂಧ ವಿಧಿಸಿರುವುದು ಕಂಡು ಬಂದಿರುವುದಿಲ್ಲ.

ರಾಷ್ಟ್ರೀಯ ಹಸಿರು ನ್ಯಾಯಮಂಡಳಿಯು ದಿನಾಂಕ 04-05-2016ರಂದು ನೀಡಿರುವ ಆದೇಶದಲ್ಲಿ ಬೆಂಗಳೂರು ನಗರಕ್ಕೆ ಸಂಬಂಧಿಸಿದಂತೆ ಬಫರ್ ಜೋನ್ ಅನ್ನು ಈ ಕೆಳಕಂಡಂತೆ ನಿಗದಿಪಡಿಸಲು ಆದೇಶಿಸಿತ್ತು.

(i) In the case of Lakes, 75m from the periphery of water body to be maintained as green belt and buffer zone for all existing water bodies i.e., lakes/wetlands.
(ii) 50m from the edge of the primary Rajkulewa's.
(iii) 35m from the edges in the case of secondary Rajkulewas.
(iv) 25m from the edges in the case of tertiary Rajkulewas.

ಮಾನ್ಯ ರಾಷ್ಟ್ರೀಯ ಹಸಿರು ನ್ಯಾಯಮಂಡಳಿಯ ದಿನಾಂಕ:04-05-2016ರ ಆದೇಶವನ್ನು ಪ್ರಶ್ನಿಸಿ ಸರ್ವೋಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಲಾಗಿದ್ದು, ಮಾನ್ಯ ಸರ್ವೋಚ್ಚ ನ್ಯಾಯಾಲಯವು ದಿನಾಂಕ:05.03.2019ರಂದು ನೀಡಿರುವ ತೀರ್ಪಿನಲ್ಲಿ ರಾಷ್ಟ್ರೀಯ ಹಸಿರು ನ್ಯಾಯಮಂಡಳಿಯ ದಿನಾಂಕ:04-05-2016ರ ಆದೇಶವನ್ನು ರದ್ದುಪಡಿಸಿರುತ್ತದೆ.

ಅರ್ಕಾವತಿ ಮತ್ತು ಕುಮುದ್ವತಿ ಕಾಲುವೆ ಪಾತ್ರದ ಗ್ರಾಮಗಳು (ವಲಯ-3) ರಲ್ಲಿನ 126 ಗ್ರಾಮಗಳ ಜನರಿಗೆ ದಿನಾಂಕ:18-11-2003ರ ಅಧಿಸೂಚನೆಯಿಂದಾಗಿರುವ ತೊಂದರೆಗಳ ಕುರಿತಂತೆ ಅಂದಿನ ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಸಣ್ಣ ನೀರಾವರಿ ಸಚಿವರ ಅಧ್ಯಕ್ಷತೆಯಲ್ಲಿ ದಿನಾಂಕ:21-11-2017 ರಂದು ನಡೆದ ಸಭೆಯಲ್ಲಿ ಈ ಕೆಳಕಂಡಂತೆ ಬಫರ್ ಜೋನ್ ನಿಗದಿಪಡಿಸುವ ಬಗ್ಗೆ ಕ್ರಮ ಕೈಗೊಳ್ಳುವಂತೆ ಸೂಚಿಸಲಾಗಿರುತ್ತದೆ.

| | | |
|---|---|---|
| 4 | Bangalore Metropolitan Region Development Authority -Bangalore Metropolitan Revised Structure Plan-2031 | I. 30 m. from the edge of primary natural drainage channel.<br>II. 15 m. from the edge of secondary natural drainage channel.<br>III. 10 m. from the edge of tertiary natural drainage channel. |

ಈ ಬಗ್ಗೆ ಹಲವಾರು ಹಂತಗಳಲ್ಲಿ, ಸಭೆಗಳನ್ನು ಏರ್ಪಡಿಸಿ ಚರ್ಚಿಸಲಾಗಿ, ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆಯ ದಿನಾಂಕ: 18.11.2003ರ ಅಧಿಸೂಚನೆಯಲ್ಲಿ ತಿಪ್ಪಗೊಂಡನಹಳ್ಳಿ ಜಲಾಶಯ ಮತ್ತು ಅದರ ವ್ಯಾಪ್ತಿಯಲ್ಲಿ 04 ಜೋನ್‌ಗಳನ್ನು ನಿಗದಿಪಡಿಸಿದ್ದು, ಅರ್ಕಾವತಿ ಮತ್ತು ಕುಮುದ್ವತಿ ನದಿಗಳ ಅಕ್ಕಪಕ್ಕದಲ್ಲಿ 02 ಕಿ.ಮೀ.ನಷ್ಟು ಅಂತರದವರೆಗೆ ಅಭಿವೃದ್ಧಿಗಳಿಗೆ ನಿರ್ಬಂಧ ವಿಧಿಸಲಾಗಿರುವುದರಿಂದ, ಸದರಿ ಪ್ರದೇಶದ ವ್ಯಾಪ್ತಿಯಲ್ಲಿ ಅಭಿವೃದ್ಧಿಗಳು ಕುಂಠಿತವಾಗಿದ್ದು, ರಾಜ್ಯದ ಯಾವುದೇ ನದಿಗಳ ವ್ಯಾಪ್ತಿಯಲ್ಲಿ ಸಹ ಇಷ್ಟು ಅಂತರದವರೆಗೆ ಬಫರ್ ಜೋನ್ ಅನ್ನು ನಿಗದಿಪಡಿಸಿರುವುದಿಲ್ಲದಿರುವುದನ್ನು ಪರಿಶೀಲಿಸಲಾಗಿದೆ.

ತಿಪ್ಪಗೊಂಡನಹಳ್ಳಿ ಜಲಾನಯನ ಪ್ರದೇಶದ ಸಂರಕ್ಷಣೆಗಾಗಿ ದಿನಾಂಕ:18.11.2003ರ ಅಧಿಸೂಚನೆಯನ್ನು ಮುಂದುವರೆಸುವ ಬಗ್ಗೆ ಅಥವಾ ಪರ್ಯಾಯ ಕ್ರಮಗಳನ್ನು ಕೈಗೊಳ್ಳುವ ಬಗ್ಗೆ ಸರ್ಕಾರದ ನಿಲುವನ್ನು ಮಾನ್ಯ ಉಚ್ಚ ನ್ಯಾಯಾಲಯಕ್ಕೆ ತಿಳಿಸುವ ಸಂಬಂಧ ವಿಷಯವನ್ನು ಅರಣ್ಯ ಜೀವಿ ಪರಿಸ್ಥಿತಿ ಮತ್ತು ಪರಿಸರ ಇಲಾಖೆಯು ಸಚಿವ ಸಂಪುಟದ ಮುಂದೆ ತಂದಿದ್ದು, ದಿನಾಂಕ:28.06.2019ರಂದು ನಡೆದ ಸಚಿವ ಸಂಪುಟದ ಸಭೆಯಲ್ಲಿ ಈ ಕೆಳಕಂಡಂತೆ ತೀರ್ಮಾನ ತೆಗೆದುಕೊಳ್ಳಲಾಗಿರುತ್ತದೆ.

"ಮಾನ್ಯ ಸರ್ವೋಚ್ಚ ನ್ಯಾಯಾಲಯವು ಸಿವಿಲ್ ಅಪೀಲ್ ಸಂಖ್ಯೆ: 5016/2016ರಲ್ಲಿ ದಿನಾಂಕ: 05.03.2019ರಂದು ನೀಡಿದ ತೀರ್ಪನ್ನು ಹಾಗೂ ದಿನಾಂಕ: 21.11.2017ರಂದು ಅಂದಿನ ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಸಣ್ಣ ನೀರಾವರಿ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನವನ್ನು ಗಮನದಲ್ಲಿಟ್ಟುಕೊಂಡು ತಿಪ್ಪಗೊಂಡನಹಳ್ಳಿ ಜಲಾಶಯ ಹಾಗೂ ಅದರ ಜಲಾನಯನ ಪ್ರದೇಶದಲ್ಲಿನ ಅರ್ಕಾವತಿ ಮತ್ತು ಕುಮುದ್ವತಿ ನದಿಗಳ ಅಕ್ಕಪಕ್ಕದಲ್ಲಿ ಬಫರ್ ಜೋನ್‌ನ್ನು ನಗರಾಭಿವೃದ್ಧಿ ಇಲಾಖೆಯು ಸೂಕ್ತವಾಗಿ ನಿಗದಿಪಡಿಸಲು ಸಚಿವ ಸಂಪುಟವು ನಿರ್ಣಯಿಸಿತು"

ಸಚಿವ ಸಂಪುಟದ ತೀರ್ಮಾನದ ಹಿನ್ನೆಲೆಯಲ್ಲಿ, ತಿಪ್ಪಗೊಂಡನಹಳ್ಳಿ ಜಲಾಶಯ ಹಾಗೂ ಅದರ ಜಲಾನಯನ ಪ್ರದೇಶದಲ್ಲಿನ ಅರ್ಕಾವತಿ ಮತ್ತು ಕುಮುದ್ವತಿ ನದಿಗಳ ಅಕ್ಕಪಕ್ಕದಲ್ಲಿ ಸೂಕ್ತ ಬಫರ್ ಜೋನ್ ಅನ್ನು ನಿಗದಿಪಡಿಸುವ ಸಂಬಂಧ ಸೂಕ್ತ ನಿರ್ಣಯ ಕೈಗೊಳ್ಳಲು ದಿನಾಂಕ:06.07.2019 ಮತ್ತು 18.07.2019 ರಂದು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ ರವರ ಅಧ್ಯಕ್ಷತೆಯಲ್ಲಿ ವಿವಿಧ ಇಲಾಖೆಗಳೊಂದಿಗೆ ಚರ್ಚಿಸಲಾಗಿದೆ.

ಮಾನ್ಯ ಉಪ. ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ದಿನಾಂಕ: 20.07.2019ರಂದು ನಡೆದ ಸಭೆಯಲ್ಲಿ 1) ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆಯು ಹೊರಡಿಸಿರುವ ಅಧಿಸೂಚನೆ ಸಂಖ್ಯೆ: ಅಪಜೀ 215 ಇಎನ್‌ವಿ 2000, ದಿನಾಂಕ: 18.11.2003ರಲ್ಲಿ Zone-1 & Zone-2 ವ್ಯಾಪ್ತಿಯ ಪ್ರದೇಶ ಮತ್ತು ನಿರ್ಬಂಧಿತ ಚಟುವಟಿಕೆಗಳನ್ನು ಯಥಾಸ್ಥಿತಿ ಮುಂದುವರೆಸಲು, 2) Zone-3 ವಲಯದ ವ್ಯಾಪ್ತಿಯ ಪ್ರದೇಶವನ್ನು ಅರ್ಕಾವತಿ ಮತ್ತು ಕುಮುದ್ವತಿ ನದಿಗಳ ತೀರದ ಅಂಚಿನಿಂದ 1.00ಕಿ.ಮೀ. ಅಂತರಕ್ಕೆ ಬದಲಾಗಿ 500 ಮೀಟರ್‌ಗಳಿಗೆ ಮಿತಿಗೊಳಿಸಲು ಹಾಗೂ ದಿನಾಂಕ: 18.11.2003ರ ಅಧಿಸೂಚನೆಯಲ್ಲಿ ನಮೂದಿಸಿರುವ ನಿಯಂತ್ರಿತ ಚಟುವಟಿಕೆಗಳನ್ನು ಯಥಾಸ್ಥಿತಿಯಲ್ಲಿ ಮುಂದುವರೆಸಲು ತೀರ್ಮಾನಿಸಲಾಗಿರುತ್ತದೆ.



4

ಅಲ್ಲದೇ, Zone-4 ವಲಯದ ವ್ಯಾಪ್ತಿಯ ಪ್ರದೇಶವನ್ನು 1 ರಿಂದ 2 ಕಿ.ಮೀ. ಬದಲು 500ಮೀಟರ್‌ನಿಂದ 1 ಕಿ.ಮೀ.ಗೆ ಮಿತಿಗೊಳಿಸಿ ದಿನಾಂಕ:18.11.2003ರ ಅಧಿಸೂಚನೆಯಲ್ಲಿ ನಮೂದಿಸಿರುವ ಹಲವು ನಿರ್ಬಂಧಿತ ಚಟುವಟಿಕೆಗಳನ್ನು ಮುಂದುವರೆಸಿ, ಹಲವು ನಿರ್ಬಂಧಗಳೊಂದಿಗೆ ಶೈಕ್ಷಣಿಕ ಮತ್ತು ವೈದ್ಯಕೀಯ ಸಂಸ್ಥೆಗಳು, ಆಸ್ಪತ್ರೆಗಳು, ಸರ್ಕಾರಿ ಹಾಸ್ಟೆಲ್‌ಗಳು ಮತ್ತು ವಸತಿ ಕಟ್ಟಡಗಳಿಗೆ ಅನುಮತಿಸುವುದನ್ನು ಅಳವಡಿಸಿಕೊಳ್ಳಲು ಹಾಗೂ ಈ ಪ್ರದೇಶಗಳಲ್ಲಿನ ವ್ಯಾಪ್ತಿಯಲ್ಲಿ ಬಫರ್ ಜೋನ್ ಅನ್ನು ಬೆಂಗಳೂರು ಮಹಾನಗರ ಪ್ರದೇಶದ ಪರಿಷ್ಕೃತ ರಚನಾ ನಕ್ಷೆ-2031ರಲ್ಲಿ ನಿಗದಿಪಡಿಸಿರುವಂತೆ, ತಿಪ್ಪಗೊಂಡನಹಳ್ಳಿ ಜಲಾನಯನ ಪ್ರದೇಶದ ವ್ಯಾಪ್ತಿಯಲ್ಲಿ ಬರುವ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಹಾಗೂ ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ ವ್ಯಾಪ್ತಿಯಲ್ಲಿನ ಎಲ್ಲಾ ನಗರ ಯೋಜನಾ ಪ್ರಾಧಿಕಾರಗಳು ಅವರವರ ವಲಯ ನಿಯಮಾವಳಿಗಳಲ್ಲಿ ಕಡ್ಡಾಯವಾಗಿ ಅಳವಡಿಸಿಕೊಳ್ಳಲು ತೀರ್ಮಾನಿಸಲಾಗಿರುತ್ತದೆ.

- Water bodies / Lakes – a buffer of 30.0 mtr from the edge of the Lake.
- Primary natural drainage channel (valleys)- a buffer of 30.0mtr from the edge of primary natural drainage channel.
- Secondary natural drainage channel(valleys) - a buffer of 15.0mtr from the edge of the secondary drainage channel.
- Tertiary natural drainage channel (valleys) - a buffer of 10.00mtr from the edge of the tertiary natural drainage channel.

ಈ ಬಫರ್ ಜೋನ್‌ಗಳನ್ನು non-urbanisable Zone ಗಳಾಗಿ ನಿರ್ವಹಿಸುವುದು.

ಮೇಲ್ಕಂಡ ಅಂಶಗಳನ್ನು ಪರಿಶೀಲಿಸಿ, ತಿಪ್ಪಗೊಂಡನಹಳ್ಳಿ ಜಲಾಶಯ ಮತ್ತು ಜಲಾನಯನ ಪ್ರದೇಶದ ಸಂರಕ್ಷಣೆಯನ್ನು ಗಮನದಲ್ಲಿಟ್ಟುಕೊಂಡು ಎಂಪ್ರಿ(EMPRI) ಸಂಸ್ಥೆಯು ಸಲ್ಲಿಸಿರುವ ವರದಿಯಲ್ಲಿನ ಹಲವು ಶಿಫಾರಸ್ಸುಗಳನ್ನು ಪರಿಗಣಿಸಿ, ಸದರಿ ಪ್ರದೇಶದ ವ್ಯಾಪ್ತಿಯಲ್ಲಿ ಹಲವು ನಿರ್ಬಂಧಗಳನ್ನು ವಿಧಿಸಿ ಹಾಗೂ ಸದರಿ ಪ್ರದೇಶದ ಅಭಿವೃದ್ಧಿಯನ್ನು ಸಹಾ ಗಮನದಲ್ಲಿರಿಸಿಕೊಂಡು, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ನಅಇ 11 ಬಿಎಂಆರ್ 2017, ಬೆಂಗಳೂರು, ದಿನಾಂಕ: 20.07.2019**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಹಾಗೂ ಸಚಿವ ಸಂಪುಟವು ದಿನಾಂಕ: 28.06.2019ರಂದು ನಡೆದ ಸಭೆಯಲ್ಲಿ ಕೈಗೊಂಡ ನಿರ್ಣಯದ ಹಿನ್ನೆಲೆಯಲ್ಲಿ ತಿಪ್ಪಗೊಂಡನಹಳ್ಳಿ ಜಲಾಶಯ ಮತ್ತು ಜಲಾನಯನ ಪ್ರದೇಶದ ಅರ್ಕಾವತಿ ಮತ್ತು ಕುಮುದ್ವತಿ ನದಿಗಳ ಜಲಾನಯನ ಪ್ರದೇಶದ ವ್ಯಾಪ್ತಿಯಲ್ಲಿ ಬಫರ್ ಜೋನ್ ಅನ್ನು ಈ ಕೆಳಕಂಡಂತೆ ನಿಗದಿಪಡಿಸಿ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಹಾಗೂ ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ ವ್ಯಾಪ್ತಿಯಲ್ಲಿನ ಎಲ್ಲಾ ನಗರ ಯೋಜನಾ ಪ್ರಾಧಿಕಾರಗಳಿಗೆ ಅವರವರ ವಲಯ ನಿಯಮಾವಳಿಗಳಲ್ಲಿ ಕಡ್ಡಾಯವಾಗಿ ಅಳವಡಿಸಿಕೊಳ್ಳಲು ಆದೇಶಿಸಲಾಗಿದೆ.

- Water bodies / Lakes – a buffer of 30.0 mtr from the edge of the Lake.
- Primary natural drainage channel (valleys) - a buffer of 30.0mtr from the edge of primary natural drainage channel.
- Secondary natural drainage channel (valleys) - a buffer of 15.0mtr from the edge of the secondary natural drainage channel.
- Tertiary natural drainage channel (valleys) - a buffer of 10.00mtr from the edge of the tertiary natural drainage channel.

ಈ ಬಫರ್ ಜೋನ್‌ಗಳನ್ನು non-urbanisable Zone ಗಳಾಗಿ ನಿರ್ವಹಿಸುವುದು.

ಅಲ್ಲದೇ, ಅಧಿಸೂಚನೆ ಸಂಖ್ಯೆ: ಅಪಜೀ 215 ಇಎನ್‌ವಿ 2003, ದಿನಾಂಕ: 18.11.2003ರಲ್ಲಿ ನಿಗದಿಪಡಿಸಿರುವ Zone-1, 2, 3 & 4 ರ ವಲಯಗಳಿಗೆ ಬಫರ್ ಜೋನ್ ಅನ್ನು ಹಾಗೂ ನಿರ್ಬಂಧಿತ ಚಟುವಟಿಕೆಗಳನ್ನು ಅನುಬಂಧ-1 ರಲ್ಲಿರುವಂತೆ ವಲಯ ನಿಯಮಾವಳಿಗಳಲ್ಲಿ ಕಡ್ಡಾಯವಾಗಿ ಅಳವಡಿಸಿಕೊಳ್ಳುವಂತೆ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಕೆ.ಎಸ್.ಜಗದೀಶರೆಡ್ಡಿ)
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ,

ಇವರಿಗೆ:

1) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ.
2) ಸರ್ಕಾರದ ಪ್ರಧಾನ ಕಾರ್ಯದರ್ಶಿ (ಪರಿಸರ), ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ.
3) ಸರ್ಕಾರದ ಕಾರ್ಯದರ್ಶಿ, ಸಣ್ಣ ನೀರಾವರಿ ಇಲಾಖೆ, ವಿಕಾಸ ಸೌಧ.
4) ಮಹಾನಗರ ಆಯುಕ್ತರು, ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ, ಬೆಂಗಳೂರು.
5) ಆಯುಕ್ತರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು.
6) ಅಧ್ಯಕ್ಷರು, ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಬೆಂಗಳೂರು.
7) ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
8) ನಿರ್ದೇಶಕರು, ನಗರ ಯೋಜನಾ ಇಲಾಖೆ, ಬೆಂಗಳೂರು.
9) ಸದಸ್ಯ ಕಾರ್ಯದರ್ಶಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಬೆಂಗಳೂರು.
10) ಸಂಬಂಧಪಟ್ಟ ನಗರ ಯೋಜನಾ ಪ್ರಾಧಿಕಾರಗಳ ಸದಸ್ಯ ಕಾರ್ಯದರ್ಶಿಗಳು (ಬಿ.ಎಂ.ಆರ್.ಡಿ.ಎ. ಮುಖಾಂತರ).
11) ಸರ್ಕಾರದ ಉಪ ಕಾರ್ಯದರ್ಶಿ (ಸಚಿವ ಸಂಪುಟ), ವಿಧಾನ ಸೌಧ (ಪ್ರಕರಣ ಸಂಖ್ಯೆ : ಸಿ:389/2019, ದಿನಾಂಕ: 28.06.2019).
12) ಮಾನ್ಯ ಉಪ ಮುಖ್ಯಮಂತ್ರಿಯವರ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
13) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ.
14) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.

## Annexure-1

| Zone | Area Covered | Nature of restricted/regulated activities |
|---|---|---|
| (1) | (2) | (3) |
| Zone-1 | Entire Tippagondanahalli Reservoir (TGR) catchment area specified in Annexure-2. | a) Regulation and checking over exploitation of ground water.<br>b) No fresh leases or license for mining, quarrying and stone crushers shall be granted.<br>c) No person shall dispose solid as well as liquid waste in this area without scientific Processing.<br>d) To ensure adoption of rain water harvesting systems in all the new and existing buildings, within six months from the date of issue of this order.<br>e) To promote organic farming including bio-fertilizers and bio-pesticide. |
| Zone -2 | Area covered within 2 kms from the Tippagondana halli Reservoir (TGR) boundary | No person shall carry on activities other than Agricultural or Agriculture related activities without prior permission |
| Zone-3 | Area covered within 500 mtr distance from the river banks of Arkavathy (only upto Hesarghatta tank from TGR) and Kumudvathi | No person shall carry on activities other than Agriculture or Agriculture related activities without prior permission |
| Zone-4 | Area covered within 500 mtr to 01 Km distance from the river banks of Arkavathy (only upto Hesaraghatta Tank from TGR) and Kumudvathi (Excluding the areas falling within zone 2) | a) Permit only those industrial activities which are listed as Green category, by the Karnataka State Pollution Control Board with mandatory adoption of rainwater harvesting systems and waste water treatment facilities. The other regulatory/civic agencies to issue permit only after Consent form Establishment (CFE) is obtained from the KSPCB.<br>b) Permit new residential buildings with mandatory adoption of Zero discharge sewage facilities and rainwater harvesting systems and reuse of this water for other than drinking purpose. |
| | | c) Permit Educational and Medical Institutions, Hospitals and Govt. Hostels with mandatory adoption of Zero discharge sewage facilities and rainwater harvesting systems and reuse of this water for other than drinking purpose. |

Cy

## ANNEXURE-2

## THE TIPPAGONDANAHALLI RESERVOIR CATCHMENTS LOCATION AND EXTENT:

The Tippagondanahalli Reservoir is situated about 34 Km. West of Bangalore City and is drained by the river Arkavati and the river Kumudvati. The catchment of the reservoir extends up to Dabaspet towards North-West of Bangalore City on the Bangalore-Tumkur National Highway (NH-4) and up to Nandi hills, about 60 Km north of Bangalore City. The Tippagondanahalli Reservoir catchment covers an area of 1453 sq.km. and is covered in the Survey of India toposheet No.57/G/3, G/4, G/7, G/8, G/11, G/12, H/5 and H/9. The area lies between $12^0$ 56' and $13^0$ 23' 15" North Latitudes and $77^0$ 30" and $77^0$ 41' 15" East Longitudes. The catchment occupies an area of 461.80 sq.km. (31.78% of the total catchment) of Doddaballapur Taluk; 396.91 sq.km. (27.32% of the catchment) of Nelamangala Taluk; 355.41 sq.km. (24.46% of the catchment) of Bangalore North; 132.32 sq.km. (9.11% of the catchment) of Magadi Taluk; 58.35 sq.km. (4.00% of the catchment) of Devanahalli Taluk; 40.26 sq.km. (2.77% of the catchment) of Bangalore South and 8.00 sq.km. (0.55% of the catchment) of Chikballapur Taluk.

** ** **

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಸ್. ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ರವರ ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ : 285 ಕ್ಕೆ ಸಂಬಂಧಿಸಿದ ಅನುಬಂಧ – 2**

ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರದ ಅಧಿನಿಯಮ 2014 ಹಾಗೂ ತದನಂತರದ ತಿದ್ದುಪಡಿಗಳ ಪ್ರಕರಣ (12) ರನ್ವಯ

**ಕೆರೆಗಳಲ್ಲಿ ನಿಷೇಧಿಸಲಾದ ಚಟುವಟಿಕೆಗಳು**.- ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಇದಕ್ಕೆ ವಿರುದ್ಧವಾದುದು ಏನೇ ಇದ್ದರೂ, ಯಾವೊಬ್ಬ ವ್ಯಕ್ತಿಯು ಅಥವಾ ಸಂಸ್ಥೆಯು ಅಥವಾ ಸಂಘಟನೆಯು (ನೋಂದಾಯಿತವಾದ ಅಥವಾ ನೋಂದಾಯಿತವಾಗಿಲ್ಲದ) ಅಥವಾ ಕಂಪನಿಯು ಅಥವಾ ಫರ್ಮ್ ಅಥವಾ ಸಂಘವು, ಸರ್ಕಾರಿ ಇಲಾಖೆಗಳು, ನಿಗಮ ಅಥವಾ ಯಾವುದೇ ಸ್ಥಳೀಯ ಅಥವಾ ಇತರ ಪ್ರಾಧಿಕಾರವು ಮತ್ತು ಅವುಗಳ ಏಜೆಂಟರು ಅಥವಾ ನೌಕರರು ಅಥವಾ ಅವುಗಳ ಪರವಾಗಿ ಯಾವುದೇ ಸಂಸ್ಥೆಯು,-

1. ನೀರನ್ನು ಸಂಗ್ರಹಿಸುವುದಕ್ಕಾಗಿ ಅಥವಾ ಹಿಡಿದಿಟ್ಟುಕೊಳ್ಳುವುದಕ್ಕಾಗಿ ಅಥವಾ 5ನೇ ಪ್ರಕರಣದ (9)ನೇ ಖಂಡದಲ್ಲಿ ಹೇಳಿದ ಉದ್ದೇಶದ ಹೊರತಾಗಿ ಇತರ ಯಾವುದೇ ಉದ್ದೇಶಕ್ಕಾಗಿ ಕೆರೆಯನ್ನು ಬಳಸತಕ್ಕದ್ದಲ್ಲ;

   *5ನೇ ಪ್ರಕರಣದ (9)ನೇ ಖಂಡ : " ಚರಂಡಿಯ ಕಶ್ಮಲಗಳನ್ನು ಕಡಿಮೆ ಮಾಡುವ ಮತ್ತು ಚರಂಡಿಯ ರೊಚ್ಚನ್ನು ಕೆರೆಗಳಿಗೆ ಹರಿಯಬಿಡದಿರುವುದರ ಮೂಲಕ ಜಲ ಜೀವವೈವಿಧ್ಯ, ಜಲಪಕ್ಷಿಗಳು ಮತ್ತು ಜಲೀಯ ಸಸ್ಯಗಳನ್ನು ಸುಧಾರಿಸುವುದು ಮತ್ತು ಅವುಗಳಿಗೆ ಬೇಕಾದ ಪರಿಸರವನ್ನು (ಜೌಗು ಭೂಮಿ) ಸೃಜಿಸುವುದು;"*

2. ಸರ್ಕಾರದ ಅನುಮತಿ ಇಲ್ಲದೆ ಕೆರೆ ಭೂಮಿಯ ಮೇಲೆ ಯಾವುದೇ ರಚನೆಯನ್ನು ನಿರ್ಮಿಸತಕ್ಕದ್ದಲ್ಲ, ಯಾವುದೇ ಕೆರೆ ಭೂಮಿಯನ್ನು ಅಥವಾ ಅದರ ಯಾವುದೇ ಭಾಗವನ್ನು ಅಧಿಭೋಗಕ್ಕೆ ತೆಗೆದುಕೊಳ್ಳತಕ್ಕದ್ದಲ್ಲ ಅಥವಾ ಪ್ರವಾಹದ ವಿರುದ್ಧವಾಗಿ ಮತ್ತು ಪ್ರವಾಹದ ಹರಿವಿನಲ್ಲಿರುವ ಕೆರೆಯಲ್ಲಿ ಅಥವಾ ಕೆರೆಯಿಂದ ನೀರು ಹರಿದು ಬರುತ್ತಿರುವ ಅಥವಾ ನೀರು ಹರಿದು ಹೋಗುತ್ತಿರುವ ಸ್ವಾಭಾವಿಕ ಅಥವಾ ಸಾಮಾನ್ಯವಾಗಿ ನೀರು ಹರಿಯುತ್ತಿರುವುದಕ್ಕೆ ಯಾವುದೇ ಅಡ್ಡಿಯನ್ನು ಉಂಟು ಮಾಡತಕ್ಕದ್ದಲ್ಲ;

3. ಕೆರೆಯ ಹೊರಗಿನ ಸರಹದ್ದಿನಿಂದ ಮೂವತ್ತು ಮೀಟರುಗಳೊಳಗೆ ಯಾವುದೇ ವಾಣಿಜ್ಯ ಅಥವಾ ಮನರಂಜನೆ ಅಥವಾ ಕೈಗಾರಿಕಾ ಸಂಕೀರ್ಣಗಳನ್ನು ಕಟ್ಟತಕ್ಕದ್ದಲ್ಲ ಅಥವಾ ಯಾವುದೇ ಕೈಗಾರಿಕಾ ಚಟುವಟಿಕೆಗಳನ್ನು ನಡೆಸತಕ್ಕದ್ದಲ್ಲ; ಮತ್ತು

4. ವಾಹನವನ್ನು ಬಳಸಿ ಅಥವಾ ಇತರ ರೀತಿಯಲ್ಲಿ ಕೆರೆಯಲ್ಲಿ ಭಗ್ನಾವಶೇಷಗಳನ್ನು, ಪೌರ ಘನತ್ಯಾಜ್ಯಗಳನ್ನು, ಕೆಸರನ್ನು ಅಥವಾ ಮಣ್ಣನ್ನು ಅಥವಾ ದ್ರವ ತ್ಯಾಜ್ಯಗಳನ್ನು ಅಥವಾ ಯಾವುವೇ ಮಾಲಿನ್ಯಕಾರಕಗಳನ್ನು ರಾಶಿ ಹಾಕತಕ್ಕದ್ದಲ್ಲ;

5. ನೇರವಾಗಿಯಾಗಲಿ ಅಥವಾ ಪರೋಕ್ಷವಾಗಿಯಾಗಲಿ ಕೆರೆಯಲ್ಲಿ ಸಂಸ್ಕರಿಸದಿರುವ ಚರಂಡಿ ನೀರನ್ನು ಹರಿಬಿಡತಕ್ಕದ್ದಲ್ಲ;

6. ಕೆರೆಯ ಒಡ್ಡು ಸೇರಿದಂತೆ ಕೆರೆ ಪ್ರದೇಶದೊಳಗೆ ರಸ್ತೆಗಳನ್ನು, ಸೇತುವೆಗಳನ್ನು ಮತ್ತು ಅದೇ ರೀತಿಯ ಇತರ ರಚನೆಗಳನ್ನು ನಿರ್ಮಿಸತಕ್ಕದ್ದಲ್ಲ. ಪ್ರಾಧಿಕಾರವು, ಅಂಥ ಕಾಮಗಾರಿಯ ತರುವಾಯವೂ ಕೆರೆಗಳ ಮೂಲ ಸಾಮರ್ಥ್ಯ ಕಡಿಮೆಯಾಗುವುದಿಲ್ಲ ಎಂಬುದನ್ನು ಖಚಿತಪಡಿಸಿಕೊಂಡ ತರುವಾಯ ಮಾತ್ರವೇ ಅಂಥ ಕಾಮಗಾರಿಗಳಿಗೆ ಅನುಮತಿಯನ್ನು ನೀಡಬಹುದು;

--2

7. ಒಡ್ಡನ್ನು, ನಿರುಪಯುಕ್ತ ತೂಬಿನ ಮೂಲ ಎತ್ತರವನ್ನು ಕಡಿಮೆ ಮಾಡುವುದು ಒಳಗೊಂಡಂತೆ ನಿರುಪಯುಕ್ತ ತೂಬನ್ನು ಒಡೆದುಹಾಕತಕ್ಕದ್ದಲ್ಲ ಅಥವಾ ಬೇಲಿಯನ್ನು, ಗಡಿಗುರುತು ಕಲ್ಲುಗಳನ್ನು ತೆಗೆದುಹಾಕತಕ್ಕದ್ದಲ್ಲ ಅಥವಾ ಪ್ರಾಧಿಕಾರವು ನಿರ್ಮಿಸಿದ ಭಿತ್ತಿಪತ್ರಗಳನ್ನು ಅಥವಾ ಯಾವುದೇ ಸೂಚನಾ ಫಲಕಗಳನ್ನು ತೆಗೆದು ಹಾಕತಕ್ಕದ್ದಲ್ಲ; ಮತ್ತು

8. ಕೆರೆಗಳಿಗೆ ನೇರವಾಗಿ ಅಥವಾ ಪರೋಕ್ಷವಾಗಿ ಬಾಧಕವಾದ ಯಾವುದೇ ಕೃತ್ಯವನ್ನು ಮಾಡತಕ್ಕದ್ದಲ್ಲ:

ಪರಂತು, ಈ ಅಧಿನಿಯಮದಲ್ಲಿರುವುದು ಯಾವುದು, ಪ್ರಾಧಿಕಾರವು ಕಾಲಕಾಲಕ್ಕೆ ನಿರ್ದಿಷ್ಟಪಡಿಸಬಹುದಾದ ಯಾವುದೇ ಕೆರೆಯಿಂದ ಕುಡಿಯುವುದಕ್ಕಾಗಿ ಅಥವಾ ನೀರಾವರಿಗಾಗಿ ಅಥವಾ ಮಾನವ ಬಳಕೆಗಾಗಿನ ಯಾವುದೇ ಉದ್ದೇಶಕ್ಕಾಗಿ ನೀರನ್ನು ತೆಗೆದುಕೊಳ್ಳುವುದನ್ನು ಪ್ರತಿಬಂಧಿಸತಕ್ಕದ್ದಲ್ಲ:

ಮತ್ತು ಪರಂತು, ಈ ಅಧಿನಿಯಮದಲ್ಲಿರುವುದಾವುದೂ, ಸರ್ಕಾರವು ಮತ್ತು ಪ್ರಾಧಿಕಾರವು ಕಾಲಕಾಲಕ್ಕೆ ನಿರ್ದಿಷ್ಟಪಡಿಸಿದ ಯಾವುದೇ ಕೆರೆಯಲ್ಲಿ ಅದರ ಲೈಸನ್ಸ್ ದಾರನು, ಗೇಣಿದಾರನು ಅಥವಾ ಗುತ್ತಿಗೆದಾರನು (ಕೆರೆಯ ಜಲ ಜೀವ ಪರಿಸರ ವ್ಯವಸ್ಥೆಗೆ ಅಪಾಯಕಾರಿಯಾದ ಅಥವಾ ಉಪದ್ರವಕಾರಿಯಾದ ಮೀನಿನ ಹೊರತಾಗಿ) ಮೀನು ಮರಿಗಳ ಸಂಗ್ರಹಣೆಯನ್ನು ಮತ್ತು ಮಿನುಗಾರಿಕೆ ಅಭಿವೃದ್ಧಿಯನ್ನು ಪ್ರತಿಬಂಧಿಸತಕ್ಕದ್ದಲ್ಲ.

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297

ಓದು ಬಂಧ-3 ಪ್ರ.ಸಂ 285

# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು
ವಿಶೇಷ ರಾಜ್ಯ ಪತ್ರಿಕೆ

| ಭಾಗ– IVಎ<br>Part– IVA | ಬೆಂಗಳೂರು, ಮಂಗಳವಾರ, ೨೧, ಏಪ್ರಿಲ್, ೨೦೨೦ (ವೈಶಾಖ ೦೧, ಶಕವರ್ಷ ೧೯೪೨)<br>Bengaluru, TUESDAY, 21, APRIL, 2020 (Vaishakha 01, ShakaVarsha 1942) | ನಂ. ೧೪೪<br>No. 144 |
|---|---|---|

**GOVERNMENT OF KARNATAKA**

No. UDD 15 TTP 2015

Karnataka Government Secretariats
Vikasa Soudha,
Bengaluru, Dated 21.04.2020

**NOTIFICATION**

Whereas, the draft further to amend the Zonal Regulations in force in the local planning areas, approved by the Government which the Government of Karnataka, proposes to make in exercise of the powers conferred by Section 13-E of The Karnataka Town and Country Planning Act, 1961(Karnataka Act 11 of 1963), was published in Notificaion No.UDD 15 TTP 2015, Bengaluru, dated 11-12-2019 in part-IVA of the Karnataka extraordinary No.1047 dated 11-12-2019 inviting objections and suggestions from all persons likely to be affected thereby within thirty days from the date of its publication in the official Gazette.

And whereas the said Gazette was made available to the public on 11th Dec 2019 and whereas no objection or suggestions have been received by the State Government.

Now therefore, in exercise of the powers conferred by Section 13-E of The Karnataka Town and Country Planning Act, 1961(Karnataka Act 11 of 1963), the Government of Karnataka hereby makes the following regulations, namely:-

**REGULATIONS**

1. **Title and Commencement.-** (1) These regulations may be called the Master Plans or Zoning Regulations (Amendment) Regulations, 2020.

   (2) They shall come into force from the date of their final publication in the Official Gazette.

2. **Amendment of the Master Plans or Zonal Regulations approved by the State Government of any Local Planning Area.-** Notwithstanding anything contained in the approved Master Plans or Zoning Regulations of any Local Planning Area, in force, in the State, the following Infrastructure shall be permitted within the buffer area along the rivers and other Water bodies, namely:-

   1. Water Pumping Stations;
   2. Walking tracks;
   3. Play fields without any building construction;

4. Cycling tracks; and
5. Parks

In case of rivers in Coastal regulations zones No Objection Certificate shall be obtained from the Coastal regulatory authority before permission is granted for the above uses.

By Order and in the name of the
Governor of Karnataka

**(C.S.Shivakumaraswamy)**
Under Secretary to Government
Urban Development Department.

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

SUNIL GARDE